AWAKE AND UNDERSTAND

ಜಾಗರೂಕರಾಗಿ - ಜ್ಞಾನವಂತರಾಗಿ

AWAKE AND UNDERSTAND

(PREACHINGS OF LORD MAHAVIRA)

ಜಾಗರೂಕರಾಗಿ - ಜ್ಞಾನವಂತರಾಗಿ

(ಭಗವಾನ್ ಮಹಾವೀರರ ಉಪದೇಶ ವಾಣಿ)

Author :

MUNIRAJ SREE JITENDRA VIJAYJI MAHARAJ

Translater :

G. ASWATHANARAYANA, M.A. BANGALORE.

Publisher :

NAVAJIWAN GRANTHAMALA, GARIDHAR
GUJARAT.

Copies : 5,000 1976 Price : 20 N.P.

ENGLISH, TAMIL, MALAYALAM & KANNADA BOOKS CAN BE HAD FROM

1. SHRI JAIN TATVAGYAN VIDYAPITH.
   215/16, Budhwar peth. Poona-411002.

2. BOMBAY BRANCH, Vidyapith Bhavan,
   No. 507, M.G. Road, Mulund, Bombay-400080.

3. C. L. JAIN, 5. Pillappa lane, Nagarthpet,
   Bangalore-2.

ಪುಸ್ತಕ ಸಿಗುವ ಸ್ಥಳ:

ಸಿ. ಎಲ್. ಜೈನ್, 5, ಪಿಳ್ಳಪ್ಪ ಲೇನ್, ನಗರ್ತಪೇಟೆ, ಬೆಂಗಳೂರು-2.

1

ದ್ವೇಷ ಮಾಡಬೇಡಿ

ನೀವು ಇತರರಿಗೆ ಉಪಕಾರ ಮಾಡಿದರೆ ನಿಮಗೆ ಮಿತ್ರರು ಹೆಚ್ಚಾಗುವರು. ನೀವು ಇತರರನ್ನು ಹಿಂಸಿಸಿದರೆ ನಿಮಗೆ ಶತ್ರುಗಳು ಹೆಚ್ಚುವರು. ನಿಮ್ಮ ಮುಂದಿನ ಜನ್ಮಗಳಲ್ಲಿ ನಿಮ್ಮೆದುರು ಬಂದು ಬೆಕ್ಕು-ಇಲಿಗಳ ವೈರದಂತೆ ನಿಮ್ಮ ಮೇಲೆ ಸೇಡು ತೀರಿಸುವರು.

1. If you help others. you will increase your friends. If you kill others, you will increase your enemies. They will come before you in the next births, to take revenge just as cat and rat.

ಸುಳ್ಳಿನ ಫಲ: ನಂಬಿಕೆ ನಾಶ

ನೀವು ಸುಳ್ಳು ಹೇಳಿದರೆ ಯಾರೂ ನಿಮ್ಮನ್ನು ನಂಬುವುದಿಲ್ಲ.

2. If you tell a lie, nobody will trust you.

ಪಾಪಕ್ಕೆ ಘೋರ ಶಿಕ್ಷೆ

ದುಷ್ಕರ್ಮ ಮಾಡಿ ಪಾಪಿಗಳಾಗುವುದು ಬಹು ಸುಲಭ. ಆದರೆ ಅದಕ್ಕಾಗಿ ಅನುಭವಿಸುವ ಶಿಕ್ಷೆ ಘೋರವಾದುದು. ಉದಾಹರಣೆಗೆ, ಮಾನವರು ಮತ್ತು ಪ್ರಾಣಿಗಳು ಆಸ್ಪತ್ರೆ ಮತ್ತು ಸೆರೆಮನೆಗಳಲ್ಲಿ ಅನುಭವಿಸುವ ದುರದೃಷ್ಟಕರ ದುರಂತಮಯ ಜೀವನವೇ ಅದಕ್ಕೆ ಸಾಕ್ಷಿ.

3. It is easy to commit sins and crimes but its punishments are horrible. The miseries of animals, and people in Hospitals and Jails, is an example.

ಆತ್ಮಶುದ್ಧಿಯ ಸಾಧನಗಳು

ನಮ್ಮ ವಸ್ತ್ರಗಳು ಕೊಳೆಯಾದರೆ ಶುಚಿಗೊಳಿಸಲು ಅಗಸನ ಅಂಗಡಿಗೆ ಹಾಕಲು ಹೋಗುತ್ತೇವೆ. ಅಂತೆಯೇ "ನಮ್ಮ ಆತ್ಮ ಮಲಿನವಾಗಿದೆ" ಎಂದು ನಾವು ತಿಳಿಯುವುದು ಎಂದಿಗೆ? ಅದರ ಶುದ್ಧೀಕರಣಕ್ಕೆ ಶಕ್ತರಾಗುವುದು ಹೇಗೆ? ಆತ್ಮಶುದ್ಧಿಗಾಗಿ ಯಾವುದಾದರೂ ಅಗಸನ ಅಂಗಡಿಗೆ ಹೋಗಲು ಶಕ್ಯವೇ? ಇಲ್ಲ. ತಪ, ಜಪಮಾಲಾ ಇವೆರಡೇ ಮುಕ್ತಿಗೆ- ಆತ್ಮಶುದ್ಧಿಗೆ ನೇರ ಮಾರ್ಗಗಳು.

4. We go to the laundry when our clothes are dirty. When shall we know–that "our soul is dirty" to enable us to purify it? Do we go to any laundry for its purification? Penance and Japmala are the only ways to salvation.

ದುಷ್ಟ ಸ್ವಭಾವದ ಪರಿಣಾಮ

ನಮ್ಮ ದುಷ್ಟ ಸ್ವಭಾವ ಇತರರಿಗೆ ನಾವಾಗಿ ಪ್ರದರ್ಶಿಸುವ ನಮ್ಮ ಸಾಕ್ಷ್ಯ ದಾಖಲೆಯಾಗಿದೆ. ಇತರರ ಹೃದಯದಲ್ಲಿ ದುಷ್ಟ ಪ್ರತಿಬಿಂಬವನ್ನು ಕ್ಯಾಮರಾದಂತೆ ಅದು ಮೂಡಿಸುತ್ತದೆ. ಖಂಡಿತವಾಗಿಯೂ ಅದು ಇತರರಲ್ಲಿ ನಮ್ಮ ಬಗ್ಗೆ ಅಚ್ಚೊತ್ತಿದ ಭಾವಚಿತ್ರವಾಗಿ ಪಡಿಮೂಡಿರುತ್ತದೆ.

5. Our bad nature is the certification of ourselves for others. It has a bad reflection upon their hearts. It is certain that it will have the photo print of ourselves on them.

ಸಸ್ಯಾಹಾರದ ಶ್ರೇಷ್ಠತೆ

ಸಸ್ಯಾಹಾರ ಸಜ್ಜನರಿಗೆ ಮೀಸಲಾದ ಆಹಾರ. ಹಾಗಾದರೆ ಮಾಂಸಾಹಾರ ಯಾರಿಗಾಗಿ? ದುಷ್ಟ ಪಶುಗಳಿಗೋ? ಇತರ ಪ್ರಾಣಿಗಳಿಗೋ? ನಮಗಂತೂ ಅಲ್ಲ.

6. Vegetarian food is for gentlemen. Then for whom is non–vegetarian food ? Beasts ? Creatures ?

ಜನ್ಮದಿನದ ಸಾರ್ಥಕತೆ

ಕಳೆದ ಹೋದ ವರ್ಷಗಳ ಲೆಕ್ಕಾಚಾರವೇ ಜನ್ಮದಿನದ ಪರಿಗಣನೆಯ ಉದ್ದೇಶವಾಗಿರುತ್ತದೆ. ಉಪಯುಕ್ತವಾದುದನ್ನು ಏನನ್ನೂ ಸಾಧಿಸದಿದ್ದಲ್ಲಿ ಸಿಂಹಾವಲೋಕನದಿಂದ ಬಾಳು ವ್ಯರ್ಥವಾಗುತ್ತದೆ. ಒಂದು ವೇಳೆ ಕಳೆದ ಕಾಲ ಪೂರ್ಣ ಸೌಶೀಲ್ಯದಿಂದ ಮತ್ತು ಹಿರಿಮೆಗಳಿಂದ ಕೂಡಿದ್ದರೆ

ಸಾರ್ಥಕತೆಯ ಅನುಭವವಾಗುತ್ತದೆ. ಆದ್ದರಿಂದ ಸಾರ್ಥಕ ಜೀವನಕ್ಕಾಗಿ ತಿಂಗಳಿಗೆ ಇಪ್ಪತ್ತೈದು ಬಾರಿ 'ಸಾಮಾಯಿಕ'ವನ್ನು (ಚಾಪೆಯ ಮೇಲೆ ಕುಳಿತು 48 ನಿಮಿಷಗಳ ಕಾಲ ಧ್ಯಾನದ ಮೂಲಕ ಆತ್ಮ ಚಿಂತನೆ ಮಾಡುವುದೇ ಸಾಮಾಯಿಕ.) ಆಚರಿಸಿ 'ಒಸಿರಾಮಿ' (ಸಾಮಾಯಿಕದ ಆದಿ ಮತ್ತು ಅಂತ್ಯದಲ್ಲಿ ಉಚ್ಚರಿಸುವ ಪದ 'ಒಸಿರಾಮಿ') ಹೇಳಿ.

7. The birthday is meant to take account of the years passed by. If there is nothing worth-while to look back upon, then life has failed. If it is full of virtues and merits, feel satisfied. Do 25 "Samayiks" a month. Do penance 2 hours "Vosirami".

ಜಪ-ತಪಗಳೇ ತಾರಕ ಶಕ್ತಿ

ಕೆಲವರು ಸ್ವಂತಮನೆಗಳಲ್ಲಿ ವಾಸ ಮಾಡುವರು ; ಮತ್ತೆ ಕೆಲವರು ಬಾಡಿಗೆಮನೆಗಳಲ್ಲಿ ವಾಸ ಮಾಡುವರು. ನಮ್ಮ ದೇಹ ಬಾಡಿಗೆಮನೆಯಲ್ಲಿದೆ. ಒಂದಲ್ಲ ಒಂದು ದಿನ ನಮ್ಮ ಆತ್ಮ ಈ ಬಾಡಿಗೆಮನೆಯನ್ನು ಬದಲಿಸಬೇಕಾಗುವುದು. ತಪ ಮತ್ತು ಜಪ ಇವುಗಳು ಮಾತ್ರ ಜನನ ಮತ್ತು ಮರಣಗಳಿಂದ ಪಾರುಮಾಡುವ ತಾರಕಶಕ್ತಿಗಳಾಗಿವೆ.

8. Some people live in their own houses while some in rented. Our body is on rent. One day our soul will have to change the house. Penance and Japmala are the only saviours for our birth and death.

ಸಾಮಾಯಿಕವೇ ಹೆಚ್ಚು ಉಪಯುಕ್ತ

ಒಂದು ಪೆಟ್ಟಿಗೆಯಲ್ಲಿ 5 ಗ್ರಾಂ ಇದ್ದಿಲನ್ನೂ ಇನ್ನೊಂದು ಪೆಟ್ಟಿಗೆಯಲ್ಲಿ 5 ಗ್ರಾಂ ಚಿನ್ನವನ್ನೂ ಇಡಿ. ಅವುಗಳಲ್ಲಿ ಯಾವುದು ಹೆಚ್ಚು ಬೆಲೆ ಬಾಳುವ ಪೆಟ್ಟಿಗೆ ಆಗುತ್ತದೆ. ಹಾಗೆಯೇ, ಪ್ರಾಪಂಚಿಕ ಆಸಕ್ತಿಯ ವಸ್ತುಗಳನ್ನು, ಒಂದು ಕಡೆ ಪರಿಗಣಿಸಿ, ಇನ್ನೊಂದು ಕಡೆ ದಿನಕ್ಕೆ 1 ರಿಂದ 3 ಸಲದವರೆಗೆ 'ಸಾಮಾಯಿಕ' ಮಾಡಿ ಆತ್ಮಶುದ್ಧಿಗೊಳಿಸುವ ಕಾರ್ಯವನ್ನು ಪರಿಗಣಿಸಿ. ಆಗ ಎರಡನೆಯದೇ–ಸಾಮಾಯಿಕವೇ–ಮುಂದಿನ ಜನ್ಮದಲ್ಲಿ ಆತ್ಮೋದ್ಧಾರಕ್ಕೆ ನೆರವಾಗುವ ಅಮೂಲ್ಯ ಕಾರ್ಯವಾಗಿರುತ್ತದೆ.

9. Put five grams of charcoal in one box and five grams of Gold in another. Which of them will be valuable ? Similarly, when the materialistic belongings when placed in one part, and the purified life with the help of 1 to 3 "Samayiks" everyday are considered, the latter is the only valuable deed for the soul in our next life.

9

ಮಾನವ ಜನ್ಮ ದೊಡ್ಡದು

ನಮ್ಮ ಈ ಆತ್ಮ ಈ ಭೂಮಿಯಲ್ಲಿ, ಮಾನವ ದೇಹದಲ್ಲಿ ಉತ್ತಮ ಸ್ಥಾನ ಆಕ್ರಮಿಸಿ ಜನ್ಮ ತಳೆದಿದೆ. ನಮ್ಮ ಬದುಕು ಲಾಭಕರ ಹಾಗೂ ಶ್ರೇಷ್ಠತರ ಉದ್ದೇಶಗಳಿಗಾಗಿ ಮೀಸಲಾಗಿದೆ. ಆದಕಾರಣ ಪ್ರಾಣಿಗಳ ಹಾಗೆ ಜೀವನ ಮಾಡಲು ಮತ್ತು ದುಷ್ಕರ್ಮದ ಪಾಪಕರ್ಮಗಳಿಗೆ ಒಳಗಾಗಲು ಮೀಸಲಾಗಿಲ್ಲ.

10. Our soul descended on this earth and obtained this good position in human body. Our life is meant for profitable and virtuous purposes and not to live like animals and commit sins.

10

ಸಂತೋಷಪಡಿಸಿ : ಸಂತೋಷಪಡಿ

ನೀವು ಇತರರನ್ನು ಸುಖ ಸಂತೋಷದಿಂದ ಇರಿಸಿದರೆ, ನೀವು ಸುಖ ಸಂತೋಷದಿಂದ ಇರುವಿರಿ ; ಆದ್ದರಿಂದ ನೀವು ಸುಖ ಸಂತೋಷದಿಂದ ಸದಾ ಇರಲು ಇತರರನ್ನು ಸದಾ ಸುಖ ಸಂತೋಷಗೊಳಿಸುತ್ತಿರಿ.

11. If you keep others happy you will be happy. Hence to be happy keep others happy.

ಕಳೆದ ಜೀವನ ಮರಳಿಬಾರದು

ನೀವು ಸಾಗಾಣಿಕೆ ವಿಮಾನದಲ್ಲಿ ಸಾಗರದ ಮೇಲೆ ಸಂಚರಿಸಿ, ಹತ್ತು ಕಿಲೋ ಬಿಸ್ಕತ್ತುಗಳನ್ನು ಕೆಳಕ್ಕೆ ಬೀಳಿಸಿದರೆ ಸಾಗರದಲ್ಲಿರುವ ಮೀನುಗಳು ಕಾದಿದ್ದು ಕಬಳಿಸುತ್ತವೆ. ಅನಂತರ ಅತಿವೇಗದ ಜೆಟ್ ವಿಮಾನದಲ್ಲಿ ಚೆಲ್ಲಿದ ಬಿಸ್ಕತ್ತುಗಳನ್ನು ಪಡೆಯಲು ಬೆನ್ನಟ್ಟಿದರೂ ಸಿಗಲಾರವು. ಅಂತೆಯೇ ಕಳೆದುಹೋದ ಮತ್ತು ಹಾಳಾದ ಜೀವನವು ಮತ್ತೆ ಮರಳಿಬಾರದು.

12. When you go by aeroplane over the ocean, if you drop ten kilos of biscuits, the fishes are ready to eat them. Even if you go after it in a Jet aeroplane, you will not get the biscuits back Similarly, lost and spoilt life cannot be regained.

ಅಮೂಲ್ಯ ಜೀವನ ಹಾಳಾಗಬಾರದು

ಮದುವೆ ಸೂಟುಗಳನ್ನು ಮತ್ತು ಸೀರೆಗಳನ್ನು ಚರಂಡಿಗೆ ಎಸೆಯುವುದನ್ನು ಎಂದಾದರೂ ಎಲ್ಲಾದರೂ ಕಂಡಿರುವಿರಾ ? ಅಂತೆಯೇ 'ಸಾಮಾಯಿಕ' ಜಪ ಮಾಲಾ, ತಪವಿಲ್ಲದೆ ನಿಮ್ಮ ಅಮೂಲ್ಯ ಜೀವನವನ್ನು ಹಾಳು ಮಾಡಿಕೊಳ್ಳುವಿರಾ ?

13. Have you ever seen marriage suits and sarees thrown in the gutter ? In the same way without Samayik, Penance and Japmala; will you spoil away your precious life ?

ಸುಖಜೀವನದ ಸಾಧನ

ಹೆಂಗಸೊಬ್ಬಳು ಬಾವಿಯಿಂದ ಬಕೀಟಿನಲ್ಲಿ ನೀರು ಸೇದುತ್ತಿರುವಾಗ ಆಕಸ್ಮಾತ್ತಾಗಿ ಒಮ್ಮೆ ಒಂದು ಕಪ್ಪೆ ಅದರಲ್ಲಿ ಬಂದಿತು. ಆಗ ಕಪ್ಪೆ ಹೊರಗಿನ ಜಗತ್ತನ್ನು ಕಂಡಿತು. ನಾವು ಭೂತಕಾಲದ ಜೀವನವನ್ನು ಮತ್ತು ಮುಂದಿನ ಜನ್ಮಗಳ ವಿಚಾರದಲ್ಲಿ ನಾವು ಬಾವಿಯ ಕತ್ತಲಲ್ಲಿ ಕಪ್ಪೆ ಇದ್ದಂತೆ ಅಜ್ಞಾನಿಗಳಾಗಿದ್ದೇವೆ. ಈ ಜನ್ಮದಲ್ಲಿ ಜಪಮಾಲಾ ತಪ ಮಾಡದಿದ್ದರೆ ಮುಂದಿನ ಜನ್ಮದಲ್ಲಿ ಸುಖಜೀವನ ಸಾಧ್ಯವಿಲ್ಲ.

14. Once a frog accidently came out of the well in the bucket of water drawn by a lady. The frog saw the outside world. When we consider the past and coming birth, we are in the darkness of the well. Happiness in the next birth is not possible without penance or Japmala.

ಧಾರ್ಮಿಕಬ್ಯಾಂಕಿನಲ್ಲಿ ಪುಣ್ಯವೇ ಹಣ

ಜೀವನಾದ್ಯಂತ ಪಾಪಕರ್ಮಗಳನ್ನೇ ಮಾಡುವ ಜನರು ಮುಂದಿನ ಜನ್ಮದಲ್ಲಿ ಪುಣ್ಯ ಜೀವಿಯಾಗಿ ಹುಟ್ಟಲು ಬೇಕಾಗುವ ಯಾವುದೇ ಪುಣ್ಯಕರ ಸದ್ಗುಣಗಳನ್ನು ಹೊಂದಿರುವುದಿಲ್ಲ. ಏಕೆಂದರೆ ಅವರ ಬಾಳಿನ ಬ್ಯಾಂಕಿನಲ್ಲಿ ಪುಣ್ಯ ಕಾರ್ಯಗಳೆಂಬ ಹಣ ಏನೂ ಉಳಿತಾಯವಾಗಿರುವುದಿಲ್ಲ. ಏಕೆಂದರೆ ಅಂಥ ಜನರು ತಮ್ಮ ಧಾರ್ಮಿಕ ಬ್ಯಾಂಕಿನಲ್ಲಿ ಸಾಮಾಯಿಕ, ಜಪಮಾಲಾ, ತಪಗಳಿಂದ ಸದ್ಗುಣಭರಿತ ಪುಣ್ಯಕಾರ್ಯಗಳೆಂಬ ಹಣವನ್ನು ಕೂಡಿಟ್ಟಿರುವುದಿಲ್ಲ.

15. People committing sins in the whole life will have no virtues to take them to a good birth in the next life; because they have no bank balance of virtues. They have not deposited virtues by doing Samayiks, Japmala and Penance in their religious bank.

ಪಂಚವಿಧ ಜೀವಿಗಳು

ಜೀವಿಗಳನ್ನು ಐದು ವರ್ಗಗಳಾಗಿ ವರ್ಗೀಕರಿಸುತ್ತಾರೆ.

1. ಏಕೇಂದ್ರೀಯ ಜೀವಿಗಳ ವರ್ಗ (ಸ್ಪರ್ಶನೇಂದ್ರೀಯ) ಉದಾ : ಭೂಮಿ, ನೀರು, ಬೆಂಕಿ, ಗಾಳಿ ಮತ್ತು ಸಸ್ಯ.
2. ದ್ವೀಂದ್ರಿಯ ಜೀವಿಗಳ ವರ್ಗ (ಸ್ಪರ್ಶನೇಂದ್ರಿಯ, ರಸನೇಂದ್ರಿಯ) ಉದಾ : ಹುಳುಗಳು.
3. ತ್ರೀಂದ್ರಿಯ ಜೀವಿಗಳ ವರ್ಗ (ಸ್ಪರ್ಶನೇಂದ್ರಿಯ, ರಸನೇಂದ್ರಿಯ, ಘ್ರಾಣೇಂದ್ರಿಯ) ಉದಾ : ಇರುವೆ ಇತ್ಯಾದಿ.
4. ಚತುರಿಂದ್ರಿಯ ಜೀವಿಗಳ ವರ್ಗ (ಸ್ಪರ್ಶನೇಂದ್ರಿಯ, ರಸನೇಂದ್ರಿಯ, ಘ್ರಾಣೇಂದ್ರಿಯ, ಚಕ್ಷುರಿಂದ್ರಿಯ) ಉದಾ : ನೊಣ, ಸೊಳ್ಳೆ, ಪತಂಗ ಇತ್ಯಾದಿ.
5, ಪಂಚೇಂದ್ರಿಯ ಜೀವಿಗಳ ವರ್ಗ (ಸ್ಪರ್ಶನೇಂದ್ರಿಯ, ರಸನೇಂದ್ರಿಯ, ಘ್ರಾಣೇಂದ್ರಿಯ, ಚಕ್ಷುರಿಂದ್ರಿಯ, ಶ್ರೋತ್ರೇಂದ್ರಿಯ) ಉದಾ : **ಮಾನವ ಜೀವಿಗಳು ಮತ್ತು ಪ್ರಾಣಿಗಳು.**

16. The forms of life can be divided into five groups.

a. Forms of life with one sense.
   e.g. earth, water, fire and wind and vegetation
b. Forms of life with two senses (Body and Taste.) e.g. worms.
c. Forms of life with three senses (Body. Taste & Smell) e.g. Ants.
d. Forms of life with four senses (Body, Taste., Smell & Sight).

   e.g. Flies, Mosquitoes, Butterflies etc.
e. Forms of life with five senses (Body, Taste, Smell, Sight & Hearing power.)
   e.g. Human beings and Animals.

17

ಭವಾವಳಿ ಅಂತ್ಯಕ್ಕೆ ಮಾರ್ಗಸೂಚಿ

ಕನ್ಯಾಕುಮಾರಿಯಲ್ಲಿ ನಿಂತು ನೋಡಿದರೆ ಸಾಗರದ ತುದಿ ನಮಗೆ ಕಾಣುವುದಿಲ್ಲ. ಅಂತೆಯೇ ಜನನ–ಮರಣ ಸಾಗರದ ತುದಿಯೂ ನಮಗೆ ಕಾಣದು; ಜನನ–ಮರಣಗಳೆಂಬ ಜೀವನ ಚಕ್ರವನ್ನು ಅಂತ್ಯಗೊಳಿಸಲು ಇರುವ ಏಕೈಕ ಪರಿಹಾರ ಮಾರ್ಗವೆಂದರೆ, ಜಪ-ತಪ–ಸಾಮಾಯಿಕಗಳನ್ನು ಕೈಗೊಳ್ಳುವುದು.

17. Just as we do not see the end of the Ocean at Kanyakumari, so also there is no end to births and deaths. To bring the end of the cycle of birth and death, the only solution is by Penance Samayik and Japmala.

ಧರ್ಮಾಚರಣೆಯಿಂದ ಅತ್ಯುನ್ನತಿ

ಜಗತ್ತಿನ ಅತ್ಯುನ್ನತ ಶಿಖರವೆನಿಸಿದ ಎವರೆಸ್ಟ್ ಶಿಖರಾರೋಹಣ ಮಾಡಿದವನು ತೇನ್‌ಸಿಂಗ್. ಆದರೆ ಸದ್ಗುಣಗಳ ಶಿಖರಾರೋಹಣದಲ್ಲಿ ನಾವು ಅವನಿಗಿಂತ ಎತ್ತರಕ್ಕೆ ಸಾಗಬಹುದು. ಜಪಮಾಲಾ–ತಪ, ಸಾಮಾಯಿಕಗಳನ್ನು ನಾವು ಮಾಡದಿದ್ದರೆ ಅತ್ಯಂತ ಕೆಳವರ್ಗದ ಸ್ಥಾನಕ್ಕೆ (ಏಕೇಂದ್ರಿಯ ಜೀವಿಗಳ ವರ್ಗಕ್ಕೆ) ಅಧಃಪತನ ಹೊಂದುವ ದಿನಗಳು ದೂರ ವಿರಲಾರವು.

18. Tensing went up the Everest the highest peak in the World. But we can go much higher than him in merits. If we do not do Penance, Samayik and Japmala, the days are not far for us to fall to the lowest level of form (as explained in 16) life.

19

ಲೌಕಿಕಸಿರಿಯಿಂದ ಮುಕ್ತಿ ಇಲ್ಲ

ಅನೇಕ ಮಕ್ಕಳನ್ನು ಪಡೆದಿದ್ದರೆ ಅಥವಾ ಎರಡು ಕಾರುಗಳು, ಎರಡು ಕಾರ್ಖಾನೆಗಳ ಮಾಲೀಕರಾಗಿದ್ದರೆ, ಇವುಗಳ ಬಗ್ಗೆ ಹೆಮ್ಮೆ ಹೊಂದಿದ್ದರೆ ಅವುಗಳ ಮೂಲಕ, ಗಳಿಸಿದ ಪಾಪ ಕರ್ಮಗಳಿಗೆ ಆಗುವ ಶಿಕ್ಷೆಯಿಂದ ತಪ್ಪಿಸಿ ಕೊಳ್ಳಲು ಸಾಧ್ಯವಾಗದು.

19. We cannot be proud of having 2 cars. 2 Factories or many children as they will not enable us to escape the punishment for the sins committed.

ಆತ್ಮದ ಅಂಚೆ—ಪುನರ್ಜನ್ಮದ ನೆಲೆಗೆ

ನ್ಯೂಯಾರ್ಕಿಗಾಗಲಿ ಲಂಡನ್ನಿಗಾಗಲಿ ಪತ್ರಗಳನ್ನು ಟಪಾಲಿಗೆ ಹಾಕಿದರೆ ಅವು ಹೋಗಿ ತಮ್ಮ ನೆಲೆಯನ್ನು ಸೇರುತ್ತವೆ. ಹಾಗೆಯೇ ನಮ್ಮ ಇಂದಿನ ಜೀವನದ ಪುಣ್ಯಕಾರ್ಯಗಳಿಗೆ ಅಥವಾ ಪಾಪಕಾರ್ಯಗಳಿಗೆ ತಕ್ಕಂತೆ ಪುನರ್ಜನ್ಮದ ನೆಲೆಯನ್ನು ಸ್ವಯಂಚಾಲಿತವಾಗಿ ನಮ್ಮ ಆತ್ಮವು ಸೇರುತ್ತದೆ.

20. Just as letters when mailed to New York and London reach their destination, our soul reaches its destination automatically on rebirth according to our merits or sins our present life.

ಧರ್ಮತ್ರಯ ಬೇಕು

ಅನುಭವಿಸಲಸಾಧ್ಯವಾದ ಜನನ, ಮುಪ್ಪು, ಮರಣಗಳನ್ನು ಎದುರಿಸದಿದ್ದಲ್ಲಿ ನಮಗೆ ತಪ, ಜಪಮಾಲಾ ಅಥವಾ ಸಾಮಾಯಿಕದ ಅವಶ್ಯಕತೆಯಿಲ್ಲ.

21. There is no necessity for Penance, Japmala or Samayik if we were not to face the unbearable pains of birth, old age and death.

ಕ್ಷಮೆಯಿಂದ ಪಾಪನಾಶ

ಹಿಂಸೆ, ಸುಳ್ಳು ಕಳವು ಮತ್ತು ಇತರೆ ದುಷ್ಕರ್ಮಗಳು ಅವೆಷ್ಟೇ ಅತ್ಯಲ್ಪ ಪ್ರಮಾಣದಲ್ಲಿರಲಿ, ತಕ್ಕ ಶಿಕ್ಷೆಯ ಪ್ರತಿಫಲವನ್ನು ಪಡೆದೇ ಪಡೆಯುತ್ತವೆ. ಅವುಗಳನ್ನು ಕ್ಷಮಿಸುವುದಾದರೆ ಘೋರಾಪರಾಧ, ಪಾಪಾಚಾರಗಳೆಂಬ ಪದಗಳೇ ನಮ್ಮ ಜೀವನ ಶಬ್ದಕೋಶದಿಂದ ದೂರ ಸರಿಯುವುವು.

22. Killing, telling lies, theft and other misdeeds, even the smallest of its type, is Punishable. If it is to be forgiven, crimes, sin and such words be removed from our dictionary.

ಆತ್ಮದ ಅನಂತಾನಂದದ ಫಲ

ವಿಮಾನಗಳು, ರೈಲುಗಳು ಮತ್ತು ಬಸ್ಸುಗಳು ನಮ್ಮನ್ನು ಸ್ಥಳದಿಂದ ಸ್ಥಳಕ್ಕೆ ಕರೆದೊಯ್ಯುತ್ತವೆ. ಅದೇರೀತಿಯಾಗಿ ತಪ, ಜಪಮಾಲಾ ಮತ್ತು ಸಾಮಾಯಿಕ (ಚಾಪೆಯ ಮೇಲೆ ಕುಳಿತು 48 ನಿಮಿಷಗಳ ಕಾಲ ತತ್ವ ಚಿಂತನೆ ಮಾಡುತ್ತಾ ಧ್ಯಾನದ ಮೂಲಕ ಶಾಂತಿ ಹೊಂದುವುದು ಸಾಮಾಯಿಕ-) ಅತ್ಯುತ್ತಮ ಜನ್ಮದವರೆಗೆ ಅಂದರೆ ಜನನ–ಮರಣಗಳಿಲ್ಲದ ಮುಕ್ತಿಯುವರೆಗೆ ಕರೆದೊಯ್ಯಬಲ್ಲವು. ಆತ್ಮದ ಅನಂತಾನಂದ ಮಾತ್ರ ಸಾಧನವಾಗಬಲ್ಲದು.

23. Planes, Trains and Buses take us from place to place. In the same way, Penance, Japmala and Samayik can lead us to the best possible birth upto absolution where there is no birth or death. Only the eternal bliss of the soul.

ಅತ್ಯಂತ ನಿರ್ಮಲ ಜೀವನ

ನಲವತ್ತೆಂಟು ನಿಮಿಷಗಳ ಸಾಮಾಯಿಕದ ಅವಧಿಯೇ ದಿನದ ಅತ್ಯಂತ ಶ್ರೇಷ್ಠವಾದ ಶುದ್ಧ ಅವಧಿಯಾಗಿರುತ್ತದೆ. ಹೀಗಿರುವಾಗ ಸಾಧು ಮಹಾರಾಜರು ಇಡೀ ಜೀವನವೆಲ್ಲಾ ಸಾಮಾಯಿಕವನ್ನು ಕೈಗೊಂಡಿರುವುದರಿಂದ ಜಗತ್ತಿನಲ್ಲೆಲ್ಲಾ ಅತ್ಯಂತ ನಿರ್ಮಲ ಜೀವನ ಅವರದಾಗಿರುತ್ತದೆ.

24. Samayik for 48 minutes is a pure part of the day. Sadhu Maharaj has acquired the Samayik for the whole life there by it is the purest life found in the world.

ಕ್ಷಮೆಯೇ ಎಲ್ಲೆಡೆ ಇರಲಿ

ಪ್ರತಿಯೊಬ್ಬನೂ ನನ್ನ ಮಿತ್ರನಾಗಬೇಕೆಂದು ಬಯಸುವೆ. ನನ್ನ ಎಲ್ಲ ಅಪರಾಧಗಳನ್ನು ಕ್ಷಮಿಸುವಂತೆ ಅವರನ್ನು ಕೋರುವೆ. ನಾನೂ ಸಹ ಅವರ ತಪ್ಪುಗಳನ್ನು ಮನ್ನಿಸುವೆ. ನಾನೂ ಎಲ್ಲರಲ್ಲೂ–ಭೂಮಿ, ನೀರು ಸಸ್ಯಗಳಲ್ಲಿರುವ ಆತ್ಮಗಳ ಜತೆಗೂ–ಸ್ನೇಹ ಹೊಂದಲು ಇಚ್ಛಿಸುವೆ. ನಾನು ಯಾರೊಂದಿಗೂ ಶತ್ರುತ್ವ–ದ್ವೇಷ ಹೊಂದಿರುವುದಿಲ್ಲ.

25. I wish every one becomes my friend, I pray them to forgive all my crimes, I forgive them. I have friendship with all, even with souls in the Earth, Water, Vegetation. I will have no enemity with anyone.

ನಮ್ಮ ರಕ್ಷಣಾ ಸಾಧನ

ಒಂದು ಶತಮಾನದ ಹಿಂದೆ ನಮ್ಮ ಜೀವಾತ್ಮ ಏನಾಗಿತ್ತು ಎಲ್ಲಿತ್ತು ? ಇನ್ನೊಂದು ಶತಮಾನಕ್ಕೆ ಏನಾಗುತ್ತದೆ ಎಂಬುದನ್ನು ಯಾರುತಾನೇ ಬಲ್ಲರು ? ಯಾರೊಬ್ಬರೂ ನಮ್ಮ ಜೀವನದ ಇತಿಹಾಸವನ್ನು ಓದಲು ಅಥವಾ ಬರೆಯಲು ಶಕ್ಯವಿಲ್ಲ. ತಪ, ಜಪಮಾಲಾ ಮತ್ತು ಸಾಮಾಯಿಕ ಮಾತ್ರ ನಮ್ಮನ್ನು ರಕ್ಷಿಸಬಲ್ಲವು.

26. Who knows what was there a century ago and what is to come after a century. No one will read or write our history. Only Penance, Japmala and Samayik can save us.

ಕೇವಲಜ್ಞಾನದ ಮಹಿಮೆ

ಭೂ ಪ್ರದೇಶದ ಎತ್ತರವನ್ನು ಅಳೆಯಲು ಸಮುದ್ರದ ಮಟ್ಟವನ್ನು ಮಾನದಂಡವಾಗಿ ಬಳಸುತ್ತಾರೆ. ಆ ಪ್ರಕಾರವಾಗಿ ಎವರೆಸ್ಟ್ ಶಿಖರವೇ ಅತ್ಯುನ್ನತ ಎತ್ತರದ ಪ್ರದೇಶವಾಗಿದೆ. ಅದನ್ನು ಮೀರಿ ವಿಮಾನ ಸಂಚರಿಸುತ್ತದೆ ಅದೇ ರೀತಿ ನಮ್ಮ ಜ್ಞಾನದ ಅತ್ಯುನ್ನತ ಶಿಖರಸ್ಥಾನ ವನ್ನು ಮೀರಿ ಮೇಲಿರುವ ಜ್ಞಾನವೆಂದರೆ "ಕೇವಲಜ್ಞಾನ". ಅದು ನಮ್ಮಲ್ಲಿಯೇ ಅಂತರ್ಗತವಾಗಿರುತ್ತದೆ. ಅದನ್ನು ಜಪ, ತಪ, ಸಾಮಾಯಿಕ ದಿಂದ ಸಾಧಿಸಬಹುದು.

27. Just as sea level is the base for measurement of height in the world and Everest is the peak of the height, "Kevalgnanam is the peak of knowledge of our soul. It is in ourselves and we can attain it by Penance, Japmala and Samayik.

ಶ್ರೇಷ್ಠ ಪರಿಹಾರೋಪಾಯ

ಮುಪ್ಪು, ಮರಣ, ಪುನರ್ಜನ್ಮಗಳು, ಆಸ್ಪತ್ರೆಗೆ ಹೋದ ಮಾತ್ರದಿಂದಲೇ ನಿವಾರಣೆಯಾಗಲಾರದು. ತಪ, ಜಪಮಾಲಾ ಮತ್ತು ಸಾಮಾಯಿಕವೇ ಅದಕ್ಕೆ ಪರಿಹಾರೋಪಾಯಗಳು.

28· Going to hospital is no cure for old age, rebirth and death. The way to salvation is by Penance, Japmala, and Samayik.

ಬಡತನ–ಕ್ಲೇಶಗಳ ನಿವಾರಣೆ

ಬಡತನ, ಕ್ಲೇಶಗಳನ್ನು ಯಾರೊಬ್ಬರೂ ಸ್ವಾಗತಿಸುವುದಿಲ್ಲ; ಹೇಳಿ ಕರೆಯಿಸಿಕೊಳ್ಳುವುದಿಲ್ಲ. ಅವುಗಳನ್ನು ನಿವಾರಿಸುವ ಏಕೈಕಮಾರ್ಗವೆಂದರೆ ತಪ, ಜಪಮಾಲಾ ಮತ್ತು ಸಾಮಾಯಿಕ.

29. Poverty, Misery are not invited or welcomed by any-one. The only way to avoid them is through Penance, Japmala and Samayik.

ಆತ್ಮೋದ್ಧಾರದ ಸಾಧನೆ

ಒಬ್ಬ ಬಾಲಕ ಒಂದು ಲೀಟರ್ ಹಾಲಿಗೆ ಕಾಲು ಲೀಟರ್ ನೀರನ್ನು ಬೆರಸಿದ ಹಾಲನ್ನು ತರುತ್ತಾನೆ. ಅವನು ತಿಳಿಯದೆ ಮೋಸಹೋಗುತ್ತಾನೆ. ನಮ್ಮ ಪರಿಸ್ಥಿತಿಯೂ ಹಾಗೆಯೇ ಆಗಿದೆ. ನಾವು "ನಾನು ಈ ದೇಹ" ಎನ್ನಬಾರದು. ಏಕೆಂದರೆ "ನಾನು" ಎಂಬುದು ಹಾಲು ಇದ್ದಂತೆ; "ಈ ದೇಹ" ನೀರು ಇದ್ದಂತೆ. ನಾವು ಹಾಲಿಗೆ ಮಾತ್ರ ಬೆಲೆ ತೆರುತ್ತೇವೆ. ಏಕೆಂದರೆ ಹಾಲಿಗೆ ಬೆಲೆ ಇದೆ, ನೀರಿಗಿಲ್ಲ. ಜಪಮಾಲಾ, ತಪ ಮತ್ತು ಸಾಮಾಯಿಕ ಆತ್ಮೋದ್ಧಾರಕ್ಕೆ ಮೋಕ್ಷ ಮಾರ್ಗವಾಗಿದೆ.

30. A boy bought one litre of milk which was mixed with 1/4 litre of water. The boy was cheated. this is our position as well. We should not say "I body" because "I" is the milk and "Body" is the "WATER" We pay for the milk only. The milk has value but the water has not. Penance, Japmala and Samayik are for the salvation of the soul.

31

ಮುಕ್ತಿಗಾಗಿ ವಿಮೆ

ಒಬ್ಬ ಮಹಿಳೆ ಇಪ್ಪತ್ತು ಸಾವಿರ ರೂಪಾಯಿಗಳಿಗೆ ತಾನಾಗಿ ಜೀವವಿಮೆ ಮಾಡಿಸಿದಳು. ಹತ್ತು ವರುಷಗಳಾದ ಅನಂತರ ಅವಳಿಗೆ ವಿಪತ್ತು ಸಂಭವಿಸಿತು. ಆದರೆ ಜೀವವಿಮಾ ಕಂಪನಿ ಅವಳ ವಿಪತ್ತನ್ನು ತಡೆಯಲಾಗಲಿಲ್ಲ. ಜನನ ಮತ್ತು ಮರಣಗಳ ಮೇಲೆ ಹತೋಟಿಯಾಗಲಿ, ವಿಪತ್ತುಗಳನ್ನು ತಡೆಯುವುದಕ್ಕಾಗಲಿ ವಿಮಾ ಕಂಪನಿಯಿಂದ ಸಾಧ್ಯವಿಲ್ಲ. ಕೇವಲ ಜಪಮಾಲಾ ತಪ ಮತ್ತು ಸಾಮಾಯಿಕ ಇವುಗಳು ಮಾತ್ರ ಮುಕ್ತಿಗಳಿಕೆಗೆ ವಿಮೆಯಾಗಿದೆ.

31. A lady Insured herself for Rs. 20,000/– for 15 years. After 10 years a calamity befell her, but the insurance company could not avoid it. Insurance company cannot avoid calamities and has no control over Birth and Death. Only Penance, Japmala and Samayik is the insurance for salvation.

ಆತ್ಮ ಶಾಶ್ವತ

ಮೇಣದ ಬತ್ತಿ ಉರಿದರೂ ಅದು ನಾಶವಾಗುವುದಿಲ್ಲ ಎಂದು ವಿಜ್ಞಾನ ಸಾಧಿಸಿದೆ. ಮೇಣದ ಬತ್ತಿ ಉರಿದಾಗ ಅದು ಜಲಜನಕ ಮತ್ತು ಇಂಗಾಲದ ಅನಿಲಗಳಾಗಿ ಪರಿವರ್ತನೆ ಹೊಂದುತ್ತವೆ ಅಷ್ಟೆ. ಪದಾರ್ಥ ಅಲ್ಲಿ ಇಲ್ಲಿ ಎಲ್ಲೆಲ್ಲೂ ವಿವಿಧ ರೂಪದಲ್ಲಿ ಇರುತ್ತವೆ ಅಂತೆಯೇ ಆತ್ಮವೂ ಸಹ ಶಾಶ್ವತ ವಾದುದು ; ಅದು ಬದಲಾಗುವ ಅವಸ್ಥೆಗಳಲ್ಲಿ ಹಾದು ಹೋಗುತ್ತಿರುತ್ತದೆ.

32. Science has proved that even when wax candle is burnt it does not vanish. The candle transforms into Hydrogen and Carbon. The matter is here, there and everywhere. Similarly the soul is a Passenger changing forms. The soul is eternal.

– ಸಂಪೂರ್ಣಂ –